ಸಿವಿಲ್ ಜಡ್ಜ ಮತ್ತು ಜೆ. ಎಂ. ಎಫ್. ಸಿ. ನ್ಯಾಯಾಲಯ, ಶಿಗ್ಗಾಂವ
ಕ್ರಿ.ಮಿ. ನಂಃ 126 -2017

ಪಿ.ಡಬ್ಲ್ಯೂಃ 1
ಮಧ್ಯಂತರ ಅರ್ಜಿ ಆದೇಶ ದಿನಾಂಕಃ 20-09-2021 ರ ಮೇರೆಗೆ 15-03-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟಿಸವಾಲು - ಶ್ರೀ ಎಸ್.ಎಸ್.ಹೆಚ್. ಎದುರುದಾರ ಪರ ವಕೀಲರಿಂದಃ

ನನ್ನ ಹಾಗೂ ನನ್ನ ಮಗಳಿಗೆ ಸೇರಿ ರೂ 500/- ಜೀವನಾಂಶ ಕೊಡಬೇಕೆಂದು ಆದೇಶ ಆಗಿತ್ತು ಎಂದರೆ ಸರಿ. ಸದರಿ ಆದೇಶ ಕುರಿತು ನಾನು ಮೇಲ್ಮನವಿ ಮಾಡಿರುವುದಿಲ್ಲ. ನನ್ನ ಮಗಳಿಗೆ ಮದುವೆ ಮಾಡಿರುವುದಿಲ್ಲ. ನನ್ನ ಮಗಳಿಗೆ ಹಾನಗಲ್ ತಾಲೂಕಿನ ಯಳವಟ್ಟಿ ಗ್ರಾಮದ ಜಗದೀಶ ನಾಗಪ್ಪ ಕಮ್ಮಾರ ಇತನು ನನ್ನ ಮಗಳ ಗಂಡ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ಮಗಳನ್ನು ಅವರಿಗೆ ಮದುವೆ ಮಾಡಿಕೊಡುತ್ತೇವೆ ಎಂದು ಮಾತುಕತೆ ಮಾತ್ರ ಆಗಿರುತ್ತದೆ ಎಂದು ಹೇಳುತ್ತಾರೆ. ನನ್ನ ಮಗಳು ಹಾಗೂ ಜಗದೀಶ ಇವರನ್ನು ಕರೆಸಿ ನ್ಯಾಯಾಲಯದಲಿ ಸಾಕ್ಷಿ ಮಾಡಿಸುತ್ತೇನೆ.

2. ನಾನು ನನ್ನ ಗಂಡನಿಂದ 2006 ನೇ ಇಸ್ವಿ ಇಂದ ದೂರ ಇದ್ದೇನೆ. ನನ್ನ ಮತ್ತು ಎದುರುಗಾರನ ಜೊತೆ ಆದ ಮದುವೆ ಹಿರಿಯ ಶ್ರೇಣಿ ನ್ಯಾಯಾಲಯ ಹಾನಗಲ್‌ದಲ್ಲಿ ವಿವಾಹ ವಿಚ್ಛೇದನ ಆದೇಶ ಆಗಿರುತ್ತದೆ ಎಂದರೆ ಸರಿಯಲ್ಲ. ದಿಃ 01-09-2016 ರಂದು ಎಂ. ಸಿ. ನಂ. 34/2014 ರ ಆದೇಶದ ಪ್ರಕಾರ ವಿವಾಹ ವಿಚ್ಛೇದನ ಆಗಿರುತ್ತದೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿಯನ್ನು

ಹೇಳಿದರೆ ದಂಡ ಮತ್ತು ಶಿಕ್ಷೆ ಆಗುತ್ತದೆ ಎಂದು ನನಗೆ ಮಾಹಿತಿ ಇದೆ. ಸದರಿ ಪ್ರಕರಣದಲ್ಲಿ ನಾನೇ ಸ್ವತಹ ಗಂಡನಿಂದ ದೂರ ಇರುವ ಕಾರಣ ನಮ್ಮ ವಿವಾಹ ವಿಚ್ಛೇದನ ಮಾಡಿರುತ್ತಾರೆ ಎಂದರೆ ನನಗೆ ನೆನಪಿರುವುದಿಲ್ಲ. ಸದರಿ ಪ್ರಕರಣದಲ್ಲಿ ವಕೀಲರ ಮುಖಾಂತರ ಸದರ ಪ್ರಕರಣದ ಬಗ್ಗೆ ಮಾಹಿತಿಯನ್ನು ತಿಳಿದುಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ. ಈಗ ನನ್ನ ಪರವಾಗಿ ಹಾಜರಾಗಿರುವ ವಕೀಲರು ವಿವಾಹ ವಿಚ್ಛೇದನ ಪ್ರಕರಣದಲ್ಲಿ ನನ್ನ ಪರವಾಗಿ ವಕೀಲರು ಇದ್ದರು ಎಂದು ಸರಿ. ನಾನು ನಮ್ಮ ವಕೀಲರಿಗೆ ವಿವಾಹ ವಿಚ್ಛೇದನ ಪ್ರಕರಣದ ಬಗ್ಗೆ ಮಾಹಿತಿ ತಿಳಿದುಕೊಂಡಿರುವುದಿಲ್ಲ. ಈ ಪ್ರಕರಣದ ವಕೀಲು ನನ್ನ ಮತ್ತು ಎದುರುಗಾರ ನಡುವೆ ವಿವಾಹ ವಿಚ್ಛೇದನ ಆಗಿರುವ ಕುರಿತು ನನಗೆ ಮಾಹಿತಿ ಕೊಟ್ಟಿರುವುದಿಲ್ಲ. ನನ್ನ ಮತ್ತು ಎದುರುಗಾರನ ನಡುವೆ ಆದ ವಿವಾಹ ವಿಚ್ಛೇದನ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸರಿ.

2. ನನಗೆ ಯಾವುದೇ ಅಂಗ ನ್ಯೂನ್ಯತೆ ಇರುವುದಿಲ್ಲ ಎಂದರೆ ಸರಿ. ನಮ್ಮ ಊರಲ್ಲಿ ಕೂಲಿ ಕೆಲಸ ಮಾಡುವ ಹೆಣ್ಣು ಮಕ್ಕಳಿಗೆ ರೂ. 300/- ಹಾಗೂ ಗಂಡು ಮಕ್ಕಳಿಗೆ ರೂ. 350/- ಹಣವನ್ನು ಕೊಡುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಹೆಣ್ಣು ಮಕ್ಕಳಿಗೆ ರೂ. 150/- ಹಾಗೂ ಗಂಡು ಮಕ್ಕಳಿಗೆ ರೂ. 200/- ಕೊಡುತ್ತಾರೆ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಈಗ ನೀರಾವರಿ ಮಾಡಿದ್ದರಿಂದ ವರ್ಷವಿಡಿ ಕೆಲಸ ಇರುತ್ತದೆ ಎಂದರೆ ಸರಿ. ಸರ್ಕಾರದವರು ಪ್ರತಿಯೊಬ್ಬರಿಗೂ 10 ಕೇ.

ಜಿ.ಅಕ್ಕಿ, 3 ಕೆ.ಜಿ. , 1 ಕೆ.ಜಿ. ಗೋದಿ ಸಕ್ಕರೆ, 1 ಪ್ಯಾಕೇಟ್ ಎಣ್ಣೆ ಉಚಿತವಾಗಿ ಕೊಡುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಕೇವಲ ಅಕ್ಕಿಯನ್ನು ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತಾರೆ. ಬಿ.ಪಿ.ಎಲ್. ಪಡಿತರಚೀಟಿ ಹೊಂದಿದವರಿಗೆ ಸೀಮೆ ಎಣ್ಣೆ ಕೊಡುತ್ತಾರೆ ಸಾಕ್ಷಿಯು ನನಗೆ ಕೊಡುವುದಿಲ್ಲ ಎಂದು ಹೇಳುತ್ತಾರೆ. ನಾನು ಮೂಲ ಅರ್ಜಿ ಸಲ್ಲಿಸುವ ಸಮಯದಲ್ಲಿ ದಿಣಸಿಯ ಬೆಲೆ ಎಷ್ಟು ಇರುತ್ತದೆ ಪ್ರಸ್ತುತ ಅರ್ಜಿಯನ್ನು ಸಲ್ಲಿಸುವಾಗ ಕೂಡ ಅದೇ ಬೆಲೆ ಇತ್ತು ಎಂದರೆ ಸರಿ.

3. ಎದುರುಗಾರನ ತಂದೆಗೆ 85 ವರ್ಷ ಹಾಗೂ ತಾಯಿಗೆ 75 ವರ್ಷ ವಯಸ್ಸು ಆಗಿದೆ ಎಂದರೆ ಸರಿ. ಅವರಿಗೆ ವಯಾಸ್ಸಾದ ಕಾರಣ ಅವರು ಅನಾರೋಗ್ಯದಿಂದ ಬಳಲುತ್ತಿದ್ದಾರೆ ಎಂದರೆ ಸರಿ. ಎದುರುಗಾರನನ್ನು ಹೊರತು ಪಡಿಸಿಸಿ ಬೇರೆ ಯಾರು ಮಕ್ಕಳು ಇರುವುದಿಲ್ಲ ಎಂದರೆ ಸಾಕ್ಷಿಯು ಮೂರು ಜನ ಮಕ್ಕಳು ಇರುತ್ತಾರೆ ಎಂದು ಹೇಳುತ್ತಾರೆ. ಎದುರುಗಾರನ ತಂದೆ ತಾಯಿಯನ್ನು ಎದುರುಗಾರನೇ ಜೋಪಾನ ಮಾಡುತ್ತೀದ್ದಾನೆ ಎಂಬ ಪ್ರಶ್ನೆಗೆ ಅವರು ಎದುರುಗಾರನ ತಮ್ಮ ಜೊತೆ ಇರತ್ತಾರೆ ಎಂದು ಹೇಳುತ್ತಾರೆ. ಅವರು ಎದುರುಗಾರಗನ ತಮ್ಮ ಜೊತೆ ಇರುತ್ತಾರೆ ಎಂದು ಸುಳ್ಳು ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ. ಎದುರುಗಾರ ಆದಾಯ ಈ ಹೆಚ್ಚು ಇರುತ್ತದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲು ಪಡಿಸಿರುವುದಿಲ್ಲ. ನಾನು ಹಿರೇಹುಳ್ಳಾಳ ಗ್ರಾಮದ ಕೊಟೆಪ್ಪ ಎಂಬ ವ್ಯಕ್ತಿಯ ಜೊತೆ ಜೀವನ ನಡೆಸುತ್ತೀದ್ದೇನೆ

ಕ್ರಿ.ಮಿ. ನಂಃ 126 -2017

ಪಿ.ಡಬ್ಲ್ಯೂಃ 1

ಎಂದರೆ ಸರಿಯಲ್ಲ. ನಾನು 2018 ನೇ ಇಸ್ವಿಯಲ್ಲಿ ಕೋಟೆಪ್ಪನ ಜೊತೆ ವಿವಾಹ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಲಕ್ಕಿಕೊಪ್ಪ ಗ್ರಾಮದ ಬೊಮ್ಮನಹಳ್ಳಿ ಕ್ರಾಸ್ ಹತ್ತಿರ ಕೊಟೆಪ್ಪ ಮತ್ತು ನಾನು ಒಂದು ಚಹಾ ಮತ್ತು ಕಿರಾಣಿ ಅಂಗಡಿಯನ್ನು ನಡೆಸಿಕೊಂಡು ಅಲ್ಲಿಯೇ ವಾಸವಾಗಿದ್ದೇವೆ ಎಂದರೆ ಸರಿಯಲ್ಲ. ಎದುರುಗಾರನು ಕೂಲಿ ಮಾಡಿಕೊಂಡು ತಂದೆ ತಾಯಿ ಹಾಗೂ ಆತನ ಜೀವನವನ್ನು ಸಾಲ ಮಾಡಿಕೊಂಡು ನಡೆಸುತ್ತೀದ್ದಾನೆ. ನನ್ನ ಮಗಳ ಮದುವೆ ಆಗಿರುವುದಿಲ್ಲ ಎಂದು ಸುಳ್ಳು ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ. ಎದುರುಗಾರನು ತರಕಾರಿ ವ್ಯಾಪಾರ ಮಾಡಿಕೊಂಡು ವರ್ಷಕ್ಕೆ 2.5 ಲಕ್ಷ ಆದಾಯವನ್ನು ಪಡೆಯುತ್ತಾನೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು 2 ನೇ ಮದುವೆ ಆಗಿದ್ದರಿಂದ ಎದುರುಗಾರನಿಂದ ಹೆಚ್ಚಿನ ಜೀವನಾಂಶವನ್ನು ಪಡೆಯಲು ಅರ್ಹಳಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿಸಲ ನಾನು ನಾಯಾಲಯಕ್ಕೆ ಬರುವಾಗ ಕೊಟೆಪ್ಪ ಇತನ ಜೊತೆ ಬರುತ್ತೇನೆ ಎಂದರೆ ಸರಿಯಲ್ಲ. ಕೊಟೆಪ್ಪನ ಮಾತುಗಳನ್ನು ಕೇಳಿಕೊಂಡು ಎದರುಗಾರನಿಗೆ ತೊಂದರೆ ಕೊಡವ ಉದ್ದೇಶದಿಂದ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು **)**

ಓ ಹೆ ಕೆ ಸರಿ ಅದೆ.

Sd/-15-03-22

ಜೆ. ಎಂ. ಎಫ್. ಸಿ., ಶಿಗ್ಗಾಂವ.